ಸೆಂಚುರಿ ಹೊಡೆದಿದ್ದ ಮಹೇಂದ್ರ ಸಿಂಗ್ ಧೋನಿ ತರಹದ ಹುಡುಗರನ್ನು ಅವರು ಹುಡುಕಿಸಿ ಕರೆತಂದರು. ತಿಂಗಳಿಗೆ ನಾಲ್ಕು ಸಾವಿರ ರೂಪಾಯಿ ಸಂಬಳವನ್ನು ಕ್ರಿಕೆಟ್ ಆಡಲು ಅವರು ಧೋನಿಗೆ ಫಿಕ್ಸ್ ಮಾಡಿದರು. ಹಾಗೆ ಶುರುವಾದದ್ದು ಧೋನಿ ಕ್ರಿಕೆಟ್ ಪ್ರೀತಿ.

2007ರಲ್ಲಿ ಭಾರತದ ಮುಂದಿನ ನಾಯಕ ಯಾರು ಎಂಬ ಪ್ರಶ್ನೆ. ದಿಲೀಪ್ ವೆಂಗ್‌ಸರ್ಕರ್ ನೇತೃತ್ವದ ಆಯ್ಕೆ ಸಮಿತಿ ಹಲವು ಹೆಸರುಗಳನ್ನು ಮುಂದಿಟ್ಟುಕೊಂಡಿತ್ತು. ರಾಹುಲ್ ದ್ರಾವಿಡ್ ನಾಯಕತ್ವದ ಭಾರ ಕೆಳಗಿಳಿಸಲು ಬಯಸಿದ್ದರು. ಅವರು ತಕ್ಷಣಕ್ಕೆ ಸೂಚಿಸಿದ ಹೆಸರು ಧೋನಿಯದ್ದು. ಸಚಿನ್ ತೆಂಡೂಲ್ಕರ್ ಅನುಮೋದಿಸಿದ್ದೂ ಅದೇ ಹೆಸರನ್ನು. ಧೋನಿ ಭಾರತ ಏಕದಿನ ಕ್ರಿಕೆಟ್ ತಂಡದ ನಾಯಕರಾದರು. ನೀಳ ಕೂದಲು, ಒರಟು ಮುಖ, ಬ್ಯಾಕ್‌ಫುಟ್‌ನಲ್ಲಿ ಹೊಡೆಯುತ್ತಿದ್ದ ಅಸಾಂಪ್ರದಾಯಿಕ ಹೊಡೆತಗಳು ಧೋನಿಯನ್ನು ಕಣ್ಣರಳಿಸಿ ನೋಡುವಂತೆ ಮಾಡಿದ್ದವು. ಮೊದಮೊದಲು ಅವರು ಹಿಂದಿಯನ್ನೇ ಅಳುಕಿನಿಂದ ಮಾತನಾಡುತ್ತಿದ್ದರು. ನೋಡನೋಡುತ್ತಲೇ ಸುಲಿದ ಬಾಳೆಯ ಹಣ್ಣಿನಂದದಿ ಇಂಗ್ಲಿಷ್ ಮಾತನಾಡಲಾರಂಭಿಸಿದ್ದು ಜಗಿತ.

ಶ್ರಮ, ಆತ್ಮವಿಶ್ವಾಸ, ಜನಪ್ರಿಯತೆಯನ್ನು ನಿಭಾಯಿಸುವ ಜಾಣ್ಮೆ ಧೋನಿಯ ವಿಶೇಷತೆ. ಅವರು ಕೋಟಿಗಟ್ಟಲೆ ವಹಿವಾಟಿನ ಬ್ರಾಂಡಿಂಗ್ ಅನ್ನೂ ಹದವಾಗಿ ತೂಗಿಸಿಕೊಂಡೇ ಬಂದವರು. ಭಾರತ 2011ರಲ್ಲಿ ಏಕದಿನ ಕ್ರಿಕೆಟ್‌ನಲ್ಲಿ ವಿಶ್ವಕಪ್ ಗೆಲ್ಲುವ ಹೊತ್ತಿಗೆ ಬಾಲಿವುಡ್ ನಟ ಶಾರುಖ್ ಖಾನ್ ಕೈಯಲ್ಲಿ ಇದ್ದಷ್ಟೇ ಮೊತ್ತದ ಬ್ರಾಂಡ್‌ಗಳು ಧೋನಿ ಬುಟ್ಟಿಯಲ್ಲಿದ್ದವು.

ಭಾರತ ವಿಶ್ವಕಪ್ ಗೆಲ್ಲುವ ಮೊದಲು ಹಾಗೂ ನಂತರದ ಎರಡು ಮೂರು ವರ್ಷಗಳಲ್ಲಿ ಧೋನಿ ವರ್ಷಕ್ಕೆ ಸರಾಸರಿ ₹ 70 ಕೋಟಿಯಷ್ಟನ್ನು ಬ್ರಾಂಡ್ ಪ್ರಚಾರದ ಮೂಲಕವೇ ಬಾಚಿ ಹಾಕಿದರು. ಧೋನಿ ತಮ್ಮ ಬ್ಯಾಟ್‌ಗೆ ಅಂಟಿಸಿಕೊಳ್ಳುವ ಎಂಆರ್‌ಎಫ್ ಸ್ಟಿಕ್ಕರ್ ಒಂದೇ ವರ್ಷಕ್ಕೆ ₹ 8 ಕೋಟಿ ರೂಪಾಯಿ ಸಂಪಾದಿಸಿ ಕೊಡುತ್ತಿತ್ತು. ಮೊದಲು ಸಚಿನ್ ಬ್ಯಾಟ್ ಮೇಲೂ ಇಂಥದ್ದೇ ಸ್ಟಿಕ್ಕರ್ ಇದ್ದುದು.

ಧೋನಿಯ ಸಂಯಮವನ್ನು ಕಂಡೇ ಆಟದಲ್ಲಿ ಪಳಗಿದ ವಿರಾಟ್ ಕೊಹ್ಲಿ ಈಗ ಭಾರತ ಕ್ರಿಕೆಟ್ ತಂಡದ ನಾಯಕ. ಟೆಸ್ಟ್ ಕ್ರಿಕೆಟ್‌ಗೆ ನಮಸ್ಕಾರ ಹಾಕಿರುವ ಧೋನಿ ನಾಯಕತ್ವ ಬಿಟ್ಟರೂ ಆಟದ ವರ್ಚಸ್ಸು ಮುಕ್ಕಾಗಲು ಬಿಡಲಿಲ್ಲ. ಎಲ್ಲ ಸ್ವರೂಪದ ಕ್ರಿಕೆಟ್‌ಗೂ ಒಗ್ಗಿಕೊಂಡರು. ಟ್ವೆಂಟಿ 20 ವಿಶ್ವಕಪ್ ಕೂಡ ಗೆದ್ದರು. ಎರಡು ವಿಶ್ವಕಪ್ ಗೆಲ್ಲುವ, ಟೆಸ್ಟ್ ಕ್ರಿಕೆಟ್‌ನಲ್ಲೂ ನಾಯಕತ್ವದ ರೆಕಾರ್ಡನ್ನು ಉತ್ತಮವಾಗಿಯೂ ಸ್ಥಿರವಾಗಿಯೂ ಕಾಪಾಡಿಕೊಳ್ಳುವ ವ್ಯಕ್ತಿಯಾಗಿ ಅವರು ಸಚಿನ್‌ಗಿಂತ ಮೇಲೇರಿದ್ದು ವಿಶೇಷ.

ಧೋನಿ ಸ್ಥಿತಪ್ರಜ್ಞ. ಅವರ ಪ್ರಮುಖ ನಿರ್ಧಾರಗಳ ಕಡೆ ನಿಗಾ ವಹಿಸುತ್ತಾ ಬಂದಿರುವ ಅರುಣ್ ಪಾಂಡೆ ಒಂದು ಕಾಲದಲ್ಲಿ ರಣಜಿ ಕ್ರಿಕೆಟ್ ಆಟಗಾರ ಆಗಿದ್ದವರು. ಅವರು ತನ್ನ ಒಡೆಯ ಯಾವ ವಿವಾದಕ್ಕೂ ಸಿಲುಕಿಕೊಳ್ಳದಂತೆ ನಿಗಾ ವಹಿಸುತ್ತಾ ಬಂದರು.



ಐಪಿಎಲ್‌ನಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ಪರವಾಗಿ ಧೋನಿ ಆಡತೊಡಗಿದ ಮೇಲೆ ಅವರ ಬ್ರಾಂಡ್ ಮೌಲ್ಯ ಬೇರೆ ಬಗೆಯಲ್ಲೂ ಹೆಚ್ಚಾಯಿತು. ಚೆನ್ನೈ ಸೂಪರ್ ಕಿಂಗ್ಸ್ ತಂಡದ ಒಡೆತನ ವಿವಾದ, ಬೆಟ್ಟಿಂಗ್ ವಿವಾದ ಭುಗಿಲೆದ್ದಾಗಲೂ ಧೋನಿ ಹೆಸರು ಕೇಳಿಬಂದಿತ್ತು. ಆದರೆ, ಅವರು ಅದರಿಂದ ಕಿಂಚಿತ್ತೂ ವಿಚಲಿತರಾಗದೆ ಅಗ್ನಿದಿವ್ಯದಿಂದ ಹೊರಬಂದಂತೆ ನಕ್ಕರು. ಮತ್ತೆ ನಾಯಕನ ಟೋಪಿ ತೊಟ್ಟು ಕ್ರಿಕೆಟ್ ಅಂಗಳದಲ್ಲಿ ನಿಂತರು.

ಈಗ ವಿಶ್ವಕಪ್ ಸವಾಲನ್ನು ಎದುರಲ್ಲಿ ಇಟ್ಟುಕೊಂಡು ಧೋನಿ ಐಪಿಎಲ್‌ನಲ್ಲಿ ಬೆನ್ನಮೇಲೆ ನೋವನ್ನು ಕೂರಿಸಿಕೊಂಡೇ ಅಷ್ಟು ಚೆನ್ನಾಗಿ ಆಡುತ್ತಿದ್ದಾರೆ. ಎದುರಾಳಿಯ ಗೆಲುವಿನ ಕನಸಿನ ಮೇಲೆ ತಣ್ಣಗೇ ಅವರು ಹೇಗೆ ನೀರೆರಚಬಲ್ಲರು ಎನ್ನುವುದನ್ನು ವಿರಾಟ್ ಕೊಹ್ಲಿ ಸೇರಿದಂತೆ ಅನೇಕರು ಕಂಡುಂಡಿದ್ದಾರೆ.

ಸ್ಪಿನ್ನರ್‌ಗಳನ್ನು ಬಳಸುವಲ್ಲಿನ ಅವರ ಜಾಣ್ಮೆ, ವಿಕೆಟ್ ಕೀಪರ್ ಆಗಿ ಆಡುವ ಬರುವ ಬ್ಯಾಟ್ಸ್‌ಮನ್‌ಗಳ ದೌರ್ಬಲ್ಯಗಳನ್ನು ಹಿಡಿಯುವ ಚುರುಕುತನ, ಫೀಲ್ಡಿಂಗ್ ಬದಲಾವಣೆಯಲ್ಲಿ ಒಡ್ಡುವ ಸವಾಲುಗಳು... ಧೋನಿಯನ್ನು ವಿಶ್ವದರ್ಜೆಯಲ್ಲಿ ಕೊಂಡಾಡುವಂತೆ ಮಾಡಿವೆ. ಈ ಸಲದ ಐಪಿಎಲ್‌ನಲ್ಲಿ ಧೋನಿಯ ರನ್ ಗಳಿಕೆಯ ಸರಾಸರಿ ಮೇ 1ರ ವರೆಗೆ 119.33! ಅವರ ನಂತರದ ಸ್ಥಾನದಲ್ಲಿರುವ ಆ್ಯಂಡ್ರೆ ರಸೆಲ್ ಸರಾಸರಿ 69.42. ಹನ್ನೊಂದು ಪಂದ್ಯಗಳ 8 ಇನಿಂಗ್ಸ್‌ಗಳಲ್ಲಿ ಧೋನಿ 256 ಎಸೆತಗಳನ್ನು ಎದುರಿಸಿ 358 ರನ್‌ಗಳನ್ನು 142.62ರ ಸ್ಟ್ರೈಕ್‌ರೇಟ್‌ನಲ್ಲಿ ಗಳಿಸಿದ್ದಾರೆ. 37ರ ವಯಸ್ಸಿನಲ್ಲಿ ಯಾವ ದೃಷ್ಟಿಯಲ್ಲೂ ಮಂಕೆನಿಸದ ಪ್ರದರ್ಶನ ಇದು. ಒತ್ತಡದ ನೊಗವನ್ನು ಗೆಲುವಿನ ಮೂಲಕ ಅನೇಕ ಸಲ ಸಲೀಸಾಗಿ ಕೆಳಗಿರಿಸುವುದರಲ್ಲಿ ನಿಸ್ಸೀಮರಾಗಿರುವ ಅವರು, ಈ ಸಲದ ವಿಶ್ವಕಪ್‌ನಲ್ಲಿ ಎಂಥ ಕಾಣ್ಕೆ ನೀಡಿಯಾರು ಎಂಬ ಕುತೂಹಲವಿದೆ. ಅವರ ಉಪಸ್ಥಿತಿ ನಾಯಕ ಕೊಹ್ಲಿಗೆ ಮಹಾಮಂತ್ರಿ ಸಿಕ್ಕಂತೆಯೇ ಸರಿ. ■



ಇಂಗ್ಲೆಂಡ್‌ನಲ್ಲಿ ನಡೆಯುವ ವಿಶ್ವಕಪ್ ಕ್ರಿಕೆಟ್‌ನಲ್ಲಿ ವಿರಾಟ್ ಕೊಹ್ಲಿ ಪಾಲಿಗೆ ಧೋನಿ ಅವರದ್ದು ಚಾಣಕ್ಯನ ಪಾತ್ರ